ರಾಜ್ಯಾದ್ಯಂತ ಪ್ರಥಮ ಹಂತವಾಗಿ ಒಟ್ಟು 71 ತಾಲ್ಲೂಕುಗಳಲ್ಲಿ ಸರ್ಕಾರಿ ಜಮೀನಿನ ಅಳತೆ ಹಾಗೂ ಬಾಕಿ ಇರುವ ದರಖಾಸ್ತು ಕಡತಗಳ ವಿಲೇವಾರಿ ಎಂಬ ವಿಶೇಷ ಆಂದೋಲನವನ್ನು ಪ್ರಾರಂಭಿಸಲಾಗಿದೆ.

ಇ) ಸರ್ವೆ ನಂಬರುಗಳ ಪೋಡುಗಳ ದರಖಾಸ್ತು ಬಗ್ಗೆ ಅರ್ಜಿದಾರರಿಗೆ ಸೂಕ್ತ ಕ್ರಮ ಕೈಗೊಂಡಿರುವ ಮಾಹಿತಿಗಳನ್ನು ಹಿಂಬಾಲಿಕಾ ಕ್ರಮದಲ್ಲಿ ನೀಡಲಾಗುತ್ತಿದೆಯೇ;

ದರಖಾಸ್ತು ಪೋಡಿ ವಿಶೇಷ ಆಂದೋಲನದಲ್ಲಿ ಸಂಬಂಧಪಟ್ಟ ಎಲ್ಲಾ ಅರ್ಜಿದಾರರಿಗೆ ಸೂಕ್ತ ಮಾಹಿತಿ ನೀಡಿಯೇ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ರೈತರು ಅರ್ಜಿ ನೀಡಿ 2 ವರ್ಷಗಳಾದರೂ ಕ್ರಮ ಕೈಗೊಂಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಆಡಳಿತಾತ್ಮಕ ಕ್ರಮಗಳೇನು;

–ಹೌದು–

ಇಲಾಖೆಯು ದರಖಾಸ್ತು ಆಂದೋಲನ ಹಮ್ಮಿಕೊಂಡಿದ್ದು, ಇದರಲ್ಲಿ ಇಲಾಖಾ ಭೂಮಾಪಕರ ಸೇವೆಯೊಂದಿಗೆ ತ್ವರಿತ ವಿಲೇವಾರಿಗಾಗಿ ಪರವಾನಗಿ ಭೂಮಾಪಕರ ಸೇವೆಯನ್ನು ಸಹ ಬಳಸಿಕೊಳ್ಳಲಾಗುತ್ತಿದೆ.

ಉ) ರೈತರ ಅರ್ಜಿಗಳ ಬಗ್ಗೆ ಕ್ರಮ ಕೈಗೊಂಡು ಅರ್ಜಿಗಳನ್ನು ವಿಲೇವಾರಿಗೊಳಿಸಲು ಕಾಲಾವಧಿಯನ್ನೇನಾದರೂ ನಿಗದಿಗೊಳಿಸಿದೆಯೇ?

ಇಲ್ಲ.

<u>ಕರ್ನಾಟಕ ವಿಧಾನ ಸಭೆ</u>

346 ಶ್ರೀ ಹೆಚ್.ಡಿ.ರೇವಣ್ಣ

ಅ) ಯಗಚಿ ಯೋಜನೆಯಡಿಯಲ್ಲಿ 60.54 ಕಿ.ಮೀಟರ್‌ನಿಂದ 63.16 ಕಿ.ಮೀಟರ್ ವರೆಗೆ (2.62 ಕಿ.ಮೀಟರ್) ಮೇಲ್ಗಾಲುವೆ ನಿರ್ಮಾಣಕ್ಕಾಗಿ ಯಾವ ವರ್ಷದಲ್ಲಿ ಟೆಂಡರ್ ಕರೆಯಲಾಗಿದೆ?

ಯಗಚಿ ಯೋಜನೆಯ 60.54 ಕಿ.ಮೀ ನಿಂದ 63.16 ಕಿ.ಮೀ ವರೆಗಿನ ಮೇಲ್ಗಾಲುವೆ ನಿರ್ಮಾಣಕ್ಕಾಗಿ ಟೆಂಡರ್ ಅನ್ನು 1998–99 ರಲ್ಲಿ (ದಿನಾಂಕ:05–06–1998) ಆಹ್ವಾನಿಸಲಾಗಿರುತ್ತದೆ.

ಆ) ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು? ಕಾಮಗಾರಿ ಮುಕ್ತಾಯಗೊಳಿಸಲು ನಿಗದಿಪಡಿಸಿದ ಅವಧಿ ಎಷ್ಟು?

ಈ ಕಾಮಗಾರಿಯ ಅಂದಾಜು ಮೊತ್ತ ರೂ.14.70 ಕೋಟಿಗಳು. ಕಾಮಗಾರಿ ಮುಕ್ತಾಯಗೊಳಿಸಲು ನಿಗದಿಪಡಿಸಿದ ಅವಧಿ 18 ತಿಂಗಳು.

ಇ) ಮುಕ್ತಾಯಗೊಳಿಸಲು ನಿಗದಿಪಡಿಸಿದ ಅವಧಿ ಮೀರಿದೆಯೇ? ಹಾಗಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು?

ಮುಕ್ತಾಯಪಡಿಸಲು ನಿಗದಿಪಡಿಸಿದ ಅವಧಿ ಮೀರಿದೆ.

ಕಾಮಗಾರಿಯ ಪ್ರಾರಂಭಿಕ ವರ್ಷದಲ್ಲಿ ಹಣ ಬಿಡುಗಡೆ ಆಗದಿರುವುದು. ವಿದ್ಯುತ್ ಕಂಬಗಳ ಸ್ಥಳಾಂತರದಲ್ಲಿ ವಿಳಂಬ, ರೈಲ್ವೆ ಇಲಾಖೆಯ ಪರವಾನಗಿಯಲ್ಲಿ ವಿಳಂಬ, ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಪರವಾನಗಿಯಲ್ಲಿ ವಿಳಂಬ ಹಾಗೂ ತಳಪಾಯದಲ್ಲಿ ಕಂಡುಬಂದ ತಾಂತ್ರಿಕ ತೊಂದರೆ ಅಲ್ಲದೆ ಗುತ್ತಿಗೆ ನಿರ್ವಹಣೆ ಸಂದರ್ಭದಲ್ಲಿ ಉಚ್ಚ ನ್ಯಾಯಾಲಯದಿಂದ ನೀಡಿದ್ದ ತಡೆಯಿಂದಾಗಿ ಕಾಮಗಾರಿ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ. ಆದ್ದರಿಂದ, ಯಾವುದೇ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿರುವುದಿಲ್ಲ.

ಈ) ಈ ಮೇಲ್ಸಾಲುವೆ ನಿರ್ಮಾಣವು ಕಳೆದ 13 ವರ್ಷದಿಂದ ನೆನಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ ಮೇಲ್ಸಾಲುವೆ ನಿರ್ಮಾಣಕ್ಕಾಗಿ ನವೆಂಬರ್ 2001 ರಲ್ಲಿ ಟೆಂಡರ್ ಅನುಮೋದನೆಗೊಂಡಿದ್ದು, ಗುತ್ತಿಗೆ ಅವಧಿ ಹೊರತುಪಡಿಸಿದರೆ, ಕಳೆದ 6 ವರ್ಷಗಳಿಂದ ಕುಂಠಿತ ಪ್ರಗತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಉ) ಹಾಗಿದ್ದಲ್ಲಿ, ಈ ಮೇಲ್ಸಾಲುವೆ ನಿರ್ಮಾಣದಲ್ಲಿ ಅನಗತ್ಯ ವಿಳಂಬದಿಂದ ಉಂಟಾಗಿರುವ ಉದ್ದೇಶಿತ ಅಚ್ಚುಕಟ್ಟು ಪ್ರದೇಶವು ಸುಮಾರು 50,000 ಎಕರೆಗಳಷ್ಟು ಜಮೀನಿಗೆ ನೀರುಣಿಸಲು ಸರ್ಕಾರ ವಿಫಲವಾಗಿರುವುದು ನಿಜವೇ?

ಈ ಮೇಲ್ಸಾಲುವೆಯು ಯಗಚಿ ಎಡದಂಡೆ ನಾಲೆಯ 61 ಕಿ.ಮೀ. ರಿಂದ 64 ಕಿ.ಮೀ. ವರೆಗೆ ಬರುತ್ತಿದ್ದು, ಮೇಲ್ಸಾಲುವೆಯ ನಂತರದ ರೀಚ್ ಅಂದರೆ 64 ಕಿ.ಮೀ. ರಿಂದ 83 ಕಿ.ಮೀ ವರೆಗೆ 15769 ಎಕರೆ ಯೋಜಿತ ಅಚ್ಚುಕಟ್ಟು ಬರುತ್ತದೆ. ಈ ಮೇಲ್ಸಾಲುವೆಯನ್ನು ಹೊರತುಪಡಿಸಿ ಮುಖ್ಯ ನಾಲೆಯ ಕಾಮಗಾರಿ ಮತ್ತು ವಿತರಣಾ ನಾಲೆಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಮೇಲ್ಸಾಲುವೆ ಸೇರಿದಂತೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳ್ಳಿಸಿ ಅಚ್ಚುಕಟ್ಟಿಗೆ ನೀರು ಒದಗಿಸುವುದು.

ಊ) ಹಾಗಿದ್ದಲ್ಲಿ, ಈ ಮೇಲ್ಸಾಲುವೆ ಕಾಮಗಾರಿಯನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

2622 ಮೀ. ಉದ್ದದ ಈ ಮೇಲ್ಸಾಲುವೆಯನ್ನು 3 ರೀಚ್‌ಗಳಾಗಿ ತೆಗೆದುಕೊಂಡಿದ್ದು, 3ನೇ ರೀಚ್ 870 ಮೀ. ಉದ್ದವಿದ್ದು, ಇದರ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಉಳಿದಂತೆ ಮೊದಲನೆಯ ರೀಚ್‌ನ ಉದ್ದವು 707 ಮೀ ಇದ್ದು, ಈ ರೀಚ್‌ಗೆ ಸಂಬಂಧಿಸಿದಂತೆ ಅಗತ್ಯವಿರುವ ವಿದ್ಯುತ್ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಇಲಾಖೆ ಮತ್ತು ರೈಲ್ವೆ ಇಲಾಖೆಯ ಪರವಾನಗಿ ಪಡೆದುಕೊಂಡಿದ್ದು, 2009-10 ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಎರಡನೆ ರೀಚ್‌ನ ಉದ್ದ 1045 ಮೀ ಇದ್ದು, ಈ ಕಾಮಗಾರಿಯ ಗುತ್ತಿಗೆಯ ವಿವಾದ ನ್ಯಾಯಾಲಯದಲ್ಲಿ

ಬಗೆ ಹರಿದಿದ್ದು, ಈಗ ಕಾಮಗಾರಿ ಪ್ರಗತಿಯಲ್ಲಿದ್ದು, 2010 ರಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

<u>ಕರ್ನಾಟಕ ವಿಧಾನ ಸಭೆ</u>.

11 ಶ್ರೀ ಪ್ರತಾಪಗೌಡ ಪಾಟೀಲ (ಮಸ್ಕಿ)
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.

ಅ) ಮೈಸೂರು ತಾಲ್ಲೂಕಿನ ಕೂರ್ಗಳ್ಳಿ ಗ್ರಾಮದ ಸುತ್ತಲಿನ ಜಮೀನುಗಳನ್ನು ಕೆಐಎಡಿಬಿಯವರು ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದ್ದು ನಿಜವೇ;

ಹೌದು.

ಆ) ಹೌದಾದಲ್ಲಿ, ಈ ಪೈಕಿ ಗ್ರಾಮದ ಸುತ್ತಲೂ ಗ್ರಾಮಾಭಿವೃದ್ಧಿಗಾಗಿ ಹಾಗೂ ಈ ಜಮೀನುಗಳಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ವಾಸವಿರುವಂತಹ ಜಮೀನುಗಳು ಸೇರಿ ಒಟ್ಟು 60 ಎಕರೆಯನ್ನು ಗ್ರಾಮಾಭಿವೃದ್ಧಿಗೆ ಬಿಟ್ಟುಕೊಡಲು ಕೋರಿಕೆ ಬಂದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಇ) ಬಂದಿದ್ದಲ್ಲಿ, ಪ್ರಸ್ತುತ ಈ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಕೂರ್ಗಳ್ಳಿ ಕೈಗಾರಿಕಾ ಪ್ರದೇಶಕ್ಕೆ ಭೂಸ್ವಾಧೀನವಾಗಿರುವ ಒಟ್ಟು 544-16 ಎಕರೆ ಜಮೀನನ್ನು ಮಂಡಳಿಯ ಕೈಗಾರಿಕಾ ಪ್ರದೇಶಕ್ಕೆ ಭೂಸ್ವಾಧೀನಪಡಿಸಿ ಕಲಂ 28(8)ರಂತೆ ಮಂಡಳಿಯ ವಶಕ್ಕೆ ಈಗಾಗಲೇ ಹಸ್ತಾಂತರಿಸಲಾಗಿದ್ದು ಈ ಹಂತದಲ್ಲಿ ಈ ಜಮೀನನ್ನು ಗ್ರಾಮಾಭಿವೃದ್ಧಿಗೆ ನೀಡಲು ಕೆಐಎಡಿ ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. ಆದರೂ ಸಹ ಈ ಜಮೀನನ್ನು ಗ್ರಾಮಾಭಿವೃದ್ಧಿಗೆ ನೀಡುವ ಬಗ್ಗೆ ಮಂಡಳಿ ಸಭೆಯಲ್ಲಿ ಮಂಡಿಸಿ, ಮಂಡಳಿ ತೆಗೆದುಕೊಳ್ಳುವ ನಿರ್ಣಯದಂತೆ ಕ್ರಮ ಜರುಗಿಸಲಾಗುವುದು.

ಈ) ಮೈಸೂರು ತಾಲ್ಲೂಕಿನ ಕಡಕೊಳ ಗ್ರಾಮದ ಸುತ್ತಮುತ್ತಲೂ ಸುಮಾರು 250 ಎಕರೆ ಜಮೀನನ್ನು ಜವಳಿ ಪಾರ್ಕ್ ಮಾಡಲು ಭೂಸ್ವಾಧೀನ ಪ್ರಕ್ರಿಯೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಉ) ಬಂದಿದ್ದಲ್ಲಿ, ಈ ಜಮೀನಿನ ಆರ್.ಟಿ.ಸಿ.ಯಲ್ಲಿ ಎಂದು ಉಲ್ಲೇಖಿಸಲಾಗಿದ್ದು ಸದರಿ ಜಮೀನುದಾರರಿಗೆ ಯಾವುದೇ ಪರಿಹಾರವನ್ನು ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು, ಸರ್ಕಾರಿ ಅಧಿಸೂಚನೆ ಪ್ರಕಟಣೆ ರೀತ್ಯಾ ಆರ್.ಟಿ.ಸಿ.ಗಳಲ್ಲಿ ಕೆಐಎಡಿಬಿ ಹೆಸರು ನಮೂದಿಸಲಾಗಿದೆ.